ಆಧುನಿಕ ಸಲಕರಣೆಗಳನ್ನು ಬಳಸಿ ಮೆಂಡೆಲನ ತಳಿ ವಿಜ್ಞಾನ ನಿಯಮಗಳನ್ನು ಪರೀಕ್ಷಿಸುವ ಪ್ರಯೋಗಗಳನ್ನು ಅಲ್ಲಿ ನಡೆಸಬಹುದಾಗಿದೆ.

ಮೆಂಡೆಲನ ಸಂಶೋಧನೆಗೆ ಸಂಬಂಧಿಸಿದ ಅಧ್ಯಯನ ನಡೆಸಿ 2009ರಲ್ಲಿ ರಾಸಾಯನಿಕ ವಿಜ್ಞಾನದ ನೊಬೆಲ್ ಬಹುಮಾನ ಗಳಿಸಿದ ಭಾರತೀಯ ಮೂಲದ ವೆಂಕಟರಾಮನ್ ರಾಮಕೃಷ್ಣನ್, ಥಾಮಸ್ ಸ್ಟಿಟ್ಸ್ ಮತ್ತು ಅದಾ ಯೊನಾಥ್ ಅವರ ಹೆಸರುಗಳನ್ನೂ ಇಲ್ಲಿ ಉಲ್ಲೇಖಿಸಲಾಗಿದೆ.

ಒಂದೊಂದು ಘಟ್ಟಕ್ಕೆ ಒಂದೊಂದು ಕೊಠಡಿ. ಪ್ರವೇಶಿಸುತ್ತಲೇ ಆ ಘಟ್ಟದ ಇಸವಿಯನ್ನು ಹೊಸಿಲ ಮೇಲೆ ಕಾಣಬಹುದು.

ಪ್ರತಿ ಕೊಠಡಿಯ ನಾಲ್ಕೂ ಗೋಡೆಗಳ ಮೇಲೆ ಚಿತ್ರಗಳು, ವರ್ಣರಂಜಿತ ಮಾದರಿಗಳು, ವೀಡಿಯೊಗಳು, ಅಂಕಿಅಂಶಗಳು.

ಮೆಂಡೆಲನ ಪ್ರಸಿದ್ಧ ಪಂಡಿತ ಪ್ರಬಂಧ– ಸಸ್ಯಗಳ ಮಿಶ್ರ ತಳಿಯ ಬಗ್ಗೆ ಪ್ರಯೋಗಗಳು– ಹಸ್ತಪ್ರತಿ ಸಂಗ್ರಹಾಲಯದ ವಿಶೇಷಗಳಲ್ಲಿ ಒಂದು. ಅವನ ಮಿಕ್ಕ ಹನ್ನೆರಡು ಪುಸ್ತಕಗಳೂ ಅಲ್ಲಿವೆ. ಸಂಶೋಧಕರಿಗೆ ಸುಗ್ಗಿ.

ಪ್ರತಿ ಕೋಣೆಗೆ ಸಂಬಂಧಿಸಿದಂತೆಯೂ ಅಲೆಸ್ ಅಧಿಕಾರಯುತವಾಗಿ ವಿವರಣೆ ನೀಡಿದ್ದು ಮೆಚ್ಚುವಂತಹುದು. ಚಾರ್ಲ್ಸ್ ಡಾರ್ವಿನ್ ಮತ್ತು ಮೆಂಡೆಲ್ ಅವರ ಸಂಬಂಧದ ಬಗ್ಗೆಯೂ ಅವರು ಮಾತನಾಡಿದರು. ಒಂದು ರೀತಿಯಲ್ಲಿ ಡಾರ್ವಿನ್‌ನನ್ನು ಮೆಂಡೆಲ್ ತನ್ನ ಗುರು ಎಂದೇ ಭಾವಿಸಿದ್ದ. ಡಾರ್ವಿನ್‌ನ 'ಆರಿಜಿನ್ ಆಫ್ ಸ್ಪೀಶೀಸ್' ಪುಸ್ತಕದಲ್ಲಿ ಸಾಕಷ್ಟು ಟಿಪ್ಪಣಿ ಮಾಡಿಕೊಂಡಿದ್ದ. ತನ್ನ ತಳಿ ವಿಜ್ಞಾನದ ಪ್ರಕಟಣೆಯನ್ನು ಡಾರ್ವಿನ್‌ಗೆ ಕಳುಹಿಸಿಯೂ ಇದ್ದ. ಆದರೆ ಡಾರ್ವಿನ್ ಅದನ್ನು ತೆರೆದು ಕೂಡ ನೋಡಲಿಲ್ಲ ಎಂಬುದಕ್ಕೆ ಸಾಕಷ್ಟು ಪುರಾವೆಗಳಿವೆ. ಸೋಜಿಗ ಎಂದರೆ, ಮುಂದೆ ಡಾರ್ವಿನ್‌ನ 'ನೈಸರ್ಗಿಕ ಆಯ್ಕೆ'ಯ ಬಗ್ಗೆ ವಿಜ್ಞಾನಿಗಳ ಅನುಮಾನಗಳನ್ನು ಬದಿಗಿರಿಸಿದ್ದು ಮೆಂಡೆಲನ ಸಂಶೋಧನೆಯೇ.



ಮೆಂಡೆಲ್ ಬಟಾಣಿ ಬೆಳೆದ ಪ್ರದೇಶ

ಅಲೆಸ್ ನಮ್ಮನ್ನು ಕಟ್ಟಡದ ಮಿಕ್ಕ ಭಾಗಗಳಿಗೆ ಕರೆತಂದರು. ಮೊದಲು ಸಿಕ್ಕಿದ್ದು ದೊಡ್ಡ ಪ್ರಾರ್ಥನಾ ಮಂದಿರ. ಕಟ್ಟಡದ ಮಹಡಿಯಲ್ಲಿ ವಿಶಾಲವಾದ ಪುಸ್ತಕ ಭಂಡಾರವನ್ನು ನೋಡಿ ಕಕ್ಕಾಬಿಕ್ಕಿಯಾದೆವು. ಎಲ್ಲಿ ನೋಡಿದರೂ ಪುಸ್ತಕಗಳೇ, ನೆಲದಿಂದ ಸೂರಿನವರೆಗೆ! ಅಲ್ಲಿದ್ದ ಮೇಜೊಂದನ್ನು ಜರುಗಿಸಿದರೆ ನೆಲಮಾಳಿಗೆಗೆ ಮೆಟ್ಟಿಲುಗಳು. ಅಲ್ಲಿಯೂ ಪುಸ್ತಕಗಳು. ಅಲ್ಲಿರುವ ಗ್ರಂಥಗಳನ್ನು ಮೆಂಡೆಲ್ ಅಲ್ಲದೆ ಮಿಕ್ಕವರೂ ಓದಿರಬಹುದು. ಓದಿನಲ್ಲಿ ಪಾದ್ರಿಗಳಿಗಿದ್ದ ಆಸಕ್ತಿಯನ್ನು ಕೊಂಡಾಡಬೇಕು. ಕೊಠಡಿಯ ಒಂದು ಮೇಜಿನ ಮೇಲಿದ್ದ ಗಾಜಿನ ಪೆಟ್ಟಿಗೆಯಲ್ಲಿ ಮೆಂಡೆಲ್ ಬಹುವಾಗಿ ಮೆಚ್ಚಿದ ಕೋಪರ್ ನಿಕಸ್‌ನ ಮಹಾನ್ ಕೃತಿ **'Revolutionibus Orbium Coelestium'** ಇದೆ. ಇದನ್ನು ಈ ಭಂಡಾರದಲ್ಲಿರುವ ಅತ್ಯಂತ ಬೆಲೆಬಾಳುವ ಗ್ರಂಥವೆಂದು ಭಾವಿಸಲಾಗಿದೆ.

ಮೆಂಡೆಲನ ಖಾಸಗಿ ಕೋಣೆಯನ್ನು ನೋಡಿ, ಕಟ್ಟಡದ ಸುತ್ತಾ ಅಡ್ಡಾಡಿ ಬಂದೆವು. ಅಲ್ಲಿ ಈಗಲೂ ಜೇನುಗೂಡುಗಳಿವೆ. ಅವುಗಳನ್ನು ರಕ್ಷಿಸುವ ಜನರೂ ಇದ್ದಾರೆ. ಮರ ಗಿಡಗಳಿಂದ ತುಂಬಿದ ಕಾಡು ಅದು. ಮೆಂಡೆಲ್ ತನ್ನ ಪ್ರಯೋಗಕ್ಕಾಗಿ 30,000 ಬಟಾಣಿ ಗಿಡಗಳನ್ನು ಬೆಳೆಸಿದ್ದ ಪ್ರದೇಶದಲ್ಲಿ ಈಗ 'ಹಸಿರು ಮನೆ' **(Green House)** ನಿರ್ಮಿಸುವ ಕಾರ್ಯ ಜರುಗುತ್ತಿದೆ.

ಮತ್ತೆ ಟಿಕೆಟ್ ಕಚೇರಿಗೆ ಬಂದು ನಿರ್ದೇಶಕಿ ಅಮಾಲಿ ಅವರನ್ನು ಕಂಡೆವು. 2022ರ ಜುಲೈ ತಿಂಗಳಿನ 'ಸುಧಾ'ದಲ್ಲಿ ಮೆಂಡೆಲನ ಬಗ್ಗೆ ನನ್ನ ಲೇಖನವೊಂದು ಪ್ರಕಟವಾಗಿತ್ತು. ಅದರ ಪ್ರತಿ ಮತ್ತು ನನ್ನ ಇಂಗ್ಲಿಷಿನ ಚಾರ್ಲ್ಸ್ ಡಾರ್ವಿನ್ ಪುಸ್ತಕದ ಪ್ರತಿ ಎರಡನ್ನೂ ವಸ್ತು ಸಂಗ್ರಹಾಲಯಕ್ಕೆ ನೀಡಿದೆವು. ಕನ್ನಡ ಲಿಪಿಯ ಬಗ್ಗೆ ಅವರಿಗೆ ಎಲ್ಲಿಲ್ಲದ ಕೌತುಕ.

ಅಲ್ಲಿಯೇ ಊಟವಾದ ನಂತರ ಅಲೆಸ್ ಮತ್ತು ಅಮಾಲಿ ಸೂಚಿಸಿದರು: 'ಮೆಂಡೆಲನ ಸಮಾಧಿ ಈ ಊರಿನಲ್ಲಿಯೇ ಇದೆ. ನೋಡಬಹುದಲ್ಲಾ?' ಕೂಡಲೇ ಅವರು ಒಂದು ಟ್ಯಾಕ್ಸಿಯನ್ನು ವ್ಯವಸ್ಥೆ ಮಾಡಿದರು. ಅಲ್ಲಿಂದ ಅರ್ಧ ಗಂಟೆಯ ಪ್ರಯಾಣ. ರುದ್ರಭೂಮಿಯ ಬಾಗಿಲಿನಲ್ಲಿ ಓರ್ವ ಅಧಿಕಾರಿಣಿ. ನಾನು 'ಮೆಂಡೆಲ್' ಎಂದ ತಕ್ಷಣ, 'ಎಡಕ್ಕೆ ತಿರುಗಿ ನೂರು ಮೀಟರ್ ಹೋಗಿ', ಎಂದಳು. ನಾವು ನಡೆದೇ ಹೋದೆವು. ಟ್ಯಾಕ್ಸಿ ನಮ್ಮ ಹಿಂದೆಯೇ ಬರುತ್ತಿತ್ತು. ಮೆಂಡೆಲನ ಸಮಾಧಿ ಸಿಕ್ಕಿತು. ಅಲ್ಲಿ ಅಂತಹ ಆಡಂಬರ ಏನೂ ಇಲ್ಲ. ನೋಡಿ ರೈಲು ನಿಲ್ದಾಣಕ್ಕೆ ಹಿಂತಿರುಗಿದೆವು. ವಿಯೆನ್ನಾದ ರೈಲು ನಮ್ಮನ್ನು ಕಾದಿತ್ತು.

ಪ್ರತಿಕ್ರಿಯಿಸಿ: **feedback@sudha.co.in**



ಮೆಂಡೆಲ್ ಮ್ಯೂಸಿಯಂನ ಮುಂಭಾಗ